ಹಾಕಿಕೊಂಡಿದ್ದಾರೆ. ಅವರಿಗೂ ಕೂಡ ಇವತ್ತು 3.50 ಪೈಸೆ ಚಾರ್ಜ್ ಫಿಕ್ಸ್ ಮಾಡಿ, ಪುನಃ ಅದರ ಮೇಲೆ 10 ರೂಪಾಯಿ ಕೊಡತಕ್ಕಂತಹ ವ್ಯವಸ್ಥೆ ತಾವು ಏನು ಮಾಡಿದ್ದೀರಿ ಮತ್ತು ಅದೇ ರೀತಿ ಪಂಪ್‌ಸೆಟ್ ಮೇಲೆ 300 ರೂ. ಮಾಡಿ ಪರ್ ಯುನಿಟ್‌ಗೆ 50 ಪೈಸೆ ಅದರ ಮೇಲೆ ಕನ್‌ಸ್ಯೂಮ್ ಮಾಡತಕ್ಕಂತದ್ದು ಆಫ್‌ಟರ್ 10 ಹೆಚ್.ಪಿ.ಗೆ ಇದು ಸರಿ ಇಲ್ಲ. ಅದುದರಿಂದ ತಮಗೆ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಾವು ಹಿರಿಯರಿದ್ದೀರಿ, ನಾನೂ ತಮಗೆ ಕೈ ಜೋಡಿಸಿ ಕೇಳಿಕೊಳ್ಳುತ್ತೇನೆ. ಈ ನೋಟಿಫಿಕೇಷನ್ ವಿತ್‌ಡ್ರಾ ಮಾಡಿ. ಕೆಳಿದ ಸಲ ತಮಗೆ ಹೇಗೆ ಸಹಕಾರ ನೀಡಿದ್ದೆವು, ಅದೇ ರೀತಿಯಾಗಿ ಈ ಸಲವೂ ಸಹಕಾರ ನೀಡುತ್ತೇವೆ. ಅದಕ್ಕೋಸ್ಕರ, ನಾವು ಕುಳಿತುಕೊಂಡು ಅದರ ಬಗ್ಗೆ ಯೋಚನೆ ಮಾಡಿ, ಚಿಂತನೆ ಮಾಡಿ ಏನು ಮಾಡಬೇಕು ಎನ್ನತಕ್ಕಂತದ್ದನ್ನು ಮಾಡೋಣ. ಅದು ಬಿಟ್ಟು ನೀವು, ಇಲ್ಲ, ನಾನು ವಿತ್‌ಡ್ರಾ ಮಾಡಿಕೊಳ್ಳುವುದಿಲ್ಲ ಎಂದರೆ, ಅನಿವಾರ್ಯವಾಗಿ ನಾವು ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

(ಮಾನ್ಯ ಶ್ರೀ ಮಲ್ಲಿಕಾರ್ಜುನ್ ಖರ್ಗೆ ಅವರು ಈ ಹಂತದಲ್ಲಿ ಧರಣಿ ಕುಳಿತುಕೊಳ್ಳಲು ಹೊರಟರು)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಖರ್ಗೆ ಅವರೇ, ನಾವು ಒಟ್ಟಿಗೆ ಹೋಗೋಣ ಬನ್ನಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳೇ, ಪ್ರಮಾಣ ಮಾಡಿ ಹೇಳುತ್ತೇನೆ. ನಿಮ್ಮ ಪಕ್ಷದವರೇ ಆದ ಸುಮಾರು 50 ಜನ ಶಾಸಕರು ನಮ್ಮಲ್ಲಿಗೆ ಬಂದು ಏನು ಹೇಳಿದ್ದಾರೆ ಎಂದರೆ, ಈ ವಿದ್ಯುತ್ ದರ ಜಾಸ್ತಿಯಾಗಿದೆ, ಇದು ಮಾಡಿರುವುದು ಸರಿ ಇಲ್ಲ. ಇದನ್ನು ಕಡಿಮೆ ಮಾಡಲು ಏನಾದರೂ ಮಾಡಿ, ನಾವು ನಿಮಗೆ ಸಹಕಾರ ಕೊಡುತ್ತೇವೆ. ಮತ್ತು ನಮ್ಮ ಪಕ್ಷದಲ್ಲಿ ಮುಖ್ಯ ಮಂತ್ರಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ನಿಮ್ಮ ಪಕ್ಷದ 10 ಜನ ಶಾಸಕರು ನಮ್ಮ ಹತ್ತಿರ ಬಂದು ಖರ್ಗೆ ಅವರು ಅಂತಾದ್ದೇನಾದರೂ ಮಾಡಿದರೆ, ನಾವು ನಿಮ್ಮ ಜೊತೆ ಬರುತ್ತೇವೆಂದು ಹೇಳಿದ್ದಾರೆ.